ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಚಿವರು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 25/07/2021

# ಕೊರೊನಾ ವೆಚ್ಚದಲ್ಲಿ ಗೊಂದಲ ಇಲ್ಲ

ಉ.ವಾ 25/7/21

**ಬೆಂಗಳೂರು:** ಕೊರೊನಾ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಹಲವು ಹೊಣೆಗಾರಿಕೆ ನಿಭಾಯಿಸಲಾಗಿದ್ದು, ವೆಚ್ಚದ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಸಮಾಜ ಕಲ್ಯಾಣ ಸಚಿವರೂ ಆದ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ತಿಳಿಸಿದ್ದಾರೆ.



ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ, ವಲಸೆ ಕಾರ್ಮಿಕರು ಹಾಗೂ ನಿರಾಶ್ರಿತರ ಸಲುವಾಗಿ ರಾಜ್ಯಾದ್ಯಂತ ಇಲಾಖೆಯ ವಸತಿ ನಿಲಯಗಳಲ್ಲಿ ಆಶ್ರಯ ನೀಡಲಾಗಿದೆ. ಇವುಗಳ ನೇತೃತ್ವವನ್ನು ಆಯಾ ಜಿಲ್ಲಾಧಿಕಾರಿಗಳು ವಹಿಸಿದ್ದು ಆದಕ್ಕೆ ತಗಲುವ ವೆಚ್ಚವನ್ನು ವಿಕೋಪ ಪರಿಹಾರ ನಿಧಿಯಿಂದ ಭರಿಸಲಾಗಿದೆ. ಇದಕ್ಕಾಗಿ 30 ಜಿಲ್ಲೆಗಳಲ್ಲಿ ಭರಿಸಲಾದ ವೆಚ್ಚ 1.24 ಕೋಟಿ ರೂ. ಈ ಪೈಕಿ ಜಿಲ್ಲಾಡಳಿತ 106 ಕೋಟಿ ರೂ. ಭರಿಸಿದೆ. ಉಳಿದಂತೆ 18.39 ಲಕ್ಷ ರೂ.ಗಳನ್ನು 8 ಜಿಲ್ಲೆಗಳ ಜಿಲ್ಲಾಡಳಿತಗಳು ಇಲಾಖೆಗೆ ಪಾವತಿಸುವುದು ಬಾಕಿ ಇದೆ ಎಂದು ಹೇಳಿದರು.

ಕೊರೊನಾ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಭಾಗವಹಿಸಲು ಪುನಃ ವಸತಿ ನಿಲಯಗಳಿಗೆ ಆಗಮಿಸುತ್ತಿದ್ದ ವಿದ್ಯಾರ್ಥಿಗಳ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಮುಖಗವಸು, ಸ್ಯಾನಿಟೈಸರ್, ಥರ್ಮಲ್ ಸ್ಕ್ಯಾನರ್ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಖರೀದಿಸಲು ಒಪ್ಪಿಗೆ ಕೊಡಲಾಗಿದೆ ಎಂದರು.

> ಸರ್ಕಾರಕ್ಕೆ ವರ್ಷ ತುಂಬಿದ ಸಂದರ್ಭದಲ್ಲಿ ಹಿರಿಯ ಸಚಿವರನ್ನು ಕೈ ಬಿಟ್ಟು ಪುನಾರಚನೆ ಮಾಡಲಾಗುವುದು ಎಂಬ ಮಾತುಗಳು ಕೇವಲ ಊಹಾಪೋಹ. ಈ ವಿಚಾರ ಪಕ್ಷದ ವೇದಿಕೆಯಲ್ಲಿ ಚರ್ಚೆಯಾಗಿಲ್ಲ.
>
> • ಗೋವಿಂದ ಕಾರಜೋಳ, ಡಿಸಿಎಂ

ಪ್ರತಿಪಕ್ಷ ನಾಯಕರು ಆರೋಪಿಸಿರುವಂತೆ ಥರ್ಮಲ್ ಸ್ಕ್ಯಾನರ್ ಅನ್ನು 9 ಸಾವಿರ ರೂ.ಗೆ ಖರೀದಿ ಮಾಡಿಲ್ಲ, ಗರಿಷ್ಠ 4,720 ರೂ.ನಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಲಾಗಿದೆ. ಸ್ಯಾನಿಟೈಸರ್ 500 ಎಂಎಲ್‌ಗೆ 600 ರೂ. ಕೊಟ್ಟು ಖರೀದಿ ಮಾಡಿಲ್ಲ 250 ರೂ. ಮಾತ್ರ ನೀಡಿ ಖರೀದಿಸಲಾಗಿದೆ. ಮಾಸ್ಕ್‌ಗಳನ್ನು ಕರ್ನಾಟಕ ಹ್ಯಾಂಡ್ ಲೂಂ ಡೆವಲಪ್‌ಮೆಂಟ್ ಸಂಸ್ಥೆಯಿಂದ ಪ್ರತಿ ಮಾಸ್ಕ್‌ಗೆ 17.54 ರೂ. ನಂತೆ ಖರೀದಿಸಲಾಗಿದೆ. ಒಟ್ಟು 65.25 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಲುವಾಗಿ 1.27 ಕೋಟಿ ರೂ. ವೆಚ್ಚ ಮಾಡಲಾಗಿದೆ. ಎಲ್ಲವೂ ಪಾರದರ್ಶಕವಾಗಿದೆ ಎಂದು ಹೇಳಿದ್ದಾರೆ.